ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಹೌದು.

ಆ) ರಾಬರ್ಟ್‌ಸನ್ ಪೇಟೆಯಲ್ಲಿ ಪರಿಶಿಷ್ಟ ಜಾತಿಯ ಬಾಲಕಿಯರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯವನ್ನು ಕಟ್ಟಲು ಮಂಜೂರು ಮಾಡಲಾಗಿದೆ. ಮತ್ತು ಕಟ್ಟಡದ ಕೆಲಸವು ಪ್ರಗತಿಯಲ್ಲಿದೆ.

ಇ) ಕರ್ನಾಟಕ ರಾಜ್ಯ — ೩೧೧೩.೯೪ ಲಕ್ಷ ರೂ. ಗಳು

ಕೋಲಾರ ಜಿಲ್ಲೆ — ೧೮೨.೩೨ ಲಕ್ಷ ರೂ ಗಳು.

ಈ) ವಿದ್ಯಾರ್ಥಿ ನಿಲಯಗಳ ಕಟ್ಟಡಗಳನ್ನು ಕಟ್ಟಲು ಆಯವ್ಯಯದಲ್ಲಿ ಒದಗಿಸಿರುವ ಹಣವನ್ನು ಅವಲಂಭಿಸಿ ಎಲ್ಲೆಲ್ಲಿ ನಿವೇಶನಗಳು ಲಭ್ಯವಿರುತ್ತವೋ ಅಲ್ಲಲ್ಲಿ ಹಂತ ಹಂತವಾಗಿ ಕಟ್ಟಡಗಳನ್ನು ಕಟ್ಟಲಾಗುವುದು. ಸಮುದಾಯ ಭವನಗಳನ್ನು ಈಗಾಗಲೇ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಮತ್ತು ಜಿಲ್ಲಾ ಉಪಯೋಜನೆಯಡಿಯಲ್ಲಿ ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನವರು ಕ್ರಮ ಕೈಗೊಳ್ಳುತ್ತಾರೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

## ಚುಂಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ಹಾಗೂ ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ಹಾಗೂ ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಗಿದೆ.

## ಕನಿಷ್ಟ ಕೂಲಿ ಬಗ್ಗೆ

೧೧೪ (ಖಿಟ) ಶ್ರೀ ಆರ್ ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಅಸಂಘಟಿತ ವಲಯಗಳ ೨೭ ಕ್ಕೂ ಹೆಚ್ಚು ವಿಭಾಗಗಳಲ್ಲಿ ದುಡಿಯುವ ಕಾರ್ಮಿಕರಿಗೆ ನಿಗದಿಯಾಗಿರುವ ಕನಿಷ್ಟ ಕೂಲಿ ಏನು ? (ಕೈಗಾರಿಕಾವಾರು ವಿವರ ನೀಡುವುದು)

ಆ) ಈ ಕನಿಷ್ಟ ಕೂಲಿಯಲ್ಲಿ ತುಟ್ಟಿಭತ್ಯೆಯನ್ನು ಸೇರಿಸಿ ನಿಗದಿಯಾಗಿರುವ ಕೈಗಾರಿಕೆಗಳೆಷ್ಟು ? (ವಿವರ ನೀಡುವುದು)

ಇ) ಈ ೨೭ ಅಸಂಘಟಿತ ಕೈಗಾರಿಕಾ ವಲಯಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು ?

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಮಂತ್ರಿಗಳು).—

ಅ) ಕರ್ನಾಟಕ ಸರ್ಕಾರವು ೩೨ ಉದ್ದಿಮೆಗಳಲ್ಲಿನ ಅಸಂಘಟಿತ ಕಾರ್ಮಿಕರಿಗೆ ಕನಿಷ ವೇತನವನ್ನು ನಿಗದಿಗೊಳಿಸಿದೆ. ವಿವರಗಳನ್ನು ಅನುಬಂಧ ' ಅ ' ದಲ್ಲಿ ನೀಡಿದೆ.

ಆ) ೩೨ ಉದ್ದಿಮೆಗಳ ಪೈಕಿ. ೨೭ ಉದ್ದಿಮೆಗಳಲ್ಲಿನ ಅಸಂಘಟಿತ ಕಾರ್ಮಿಕರಿಗೆ ತುಟ್ಟಿಭತ್ಯೆಯನ್ನು ನಿಗದಿಗೊಳಿಸಿದೆ. ವಿವರಗಳನ್ನು ಅನುಬಂಧ ' ಆ ' ದಲ್ಲಿ ನೀಡಿದೆ.

ಇ) ರಾಜ್ಯದಲ್ಲಿ ಕನಿಷ್ಟ ವೇತನ ನಿಗದಿ ಮಾಡಿರುವ ೩೨ ಉದ್ದಿಮೆಗಳಲ್ಲಿ ಸುಮಾರು ೫೬,೩೬,೦೦೦ ಕಾರ್ಮಿಕರಿರುವರೆಂದು ಅಂದಾಜು ಮಾಡಲಾಗಿದೆ.